ಧಾರ್ಮಿಕ ದತ್ತಿ ಇಲಾಖೆಯಲ್ಲಿ ವರ್ಗಾವಣೆ ಕುರಿತು.

2825: (3780)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರ್ಮಿಕ ದತ್ತಿ ಇಲಾಖೆಯಲ್ಲಿ 1997-98 ಮತ್ತು 1998-99ನೇ ಸಾಲಿನ ಅಕ್ಟೋಬರ್ 15ರ ಒಳಗೆ ಎಷ್ಟು ಮಂದಿ ಅಧಿಕಾರಿಗಳನ್ನು (ವಿವಿಧ ಹುದ್ದೆಯಲ್ಲಿ) ವರ್ಗಾಯಿಸಲಾಗಿದೆ.

2) ವರ್ಗಾವಣೆ ಆದೇಶ ನೀಡಿದ ಬಳಿಕ ಸ್ಥಳ ಬದಲಾಯಿಸಿ ಮರು ವರ್ಗಾಯಿಸಿದ ಪ್ರಕರಯಗಳು ಎಷ್ಟು?

3) ಆಮಾನತ್ತಿನಲ್ಲಿದ್ದ ಎಷ್ಟೋ ಅಧಿಕಾರಿಗಳನ್ನು ಮರು ವಿಚಾರಣೆ ನಡೆಸದೆ 'ಬಿ' ರಿಪೋರ್ಟು ಹಾಕಿ ಪ್ರಾಮುಖ್ಯವಾದ ಜಾಗಕ್ಕೆ ವರ್ಗಾಯಿಸಿರುವುದು ನಿಜವೇ ಇದಕ್ಕೆ: ಕಾರಣಗಳೇನು? (ವಿವರ ನೀಡುವುದು)

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

1)

	1997-98	1998-99
ಸಮೂಹ - ಎ	3	6
ಸಮೂಹ- ಬಿ	ಇಲ್ಲ	3
ಒಟ್ಟು	3	9

2) ಒಂದು (1)

3) ಇಂತಹ ಪ್ರಕರಣಗಳು ಯಾವುದು ಇಲ್ಲ.

ನೆರಳಿನ ಭಾಗ್ಯ ಯೋಜನೆ.

2826: (3799)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ 1997-98ನೇ ಸಾಲಿನಲ್ಲಿ ಮೀಸಲಿಟ್ಟ ಹಣವೆಷ್ಟು;

ಆ) ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ; (ಜಿಲ್ಲಾವಾರು)

ಇ) ಎಷ್ಟು ಮನೆಗಳನ್ನು ವಿತರಿಸಲಾಗಿದೆ? (ಜಿಲ್ಲಾವಾರು)

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ 1997-98ನೇ ಸಾಲಿನಲ್ಲಿ ಮೀಸಲಿಟ್ಟ ಹಣ ರೂ. 500.00 ಲಕ್ಷ

ಆ ಮತ್ತು ಇ) ನೆರಳಿನ ಭಾಗ್ಯ ಯೋಜನೆಯಡಿಯಲ್ಲಿ ಒಟ್ಟು 3359 ಹುಲ್ಲು ಜೋಪಡಿಗಳನ್ನು ಹೆಂಚಿನ ಮನೆಗಳನ್ನಾಗಿ ಉನ್ನತೀಕರಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 3799 ಕ್ಕೆ ಅನುಬಂಧ

ನೆರಳಿನ ಭಾಗ್ಯ ಯೋಜನೆ - 1997-98

ಮಾಸಲಿಟ್ಟ ಹಣ

ಕ್ರಮ ಸಂಖ್ಯೆ	ಜಿಲ್ಲೆಗಳು	ಉನ್ನತೀಕರಿಸಿರುವ ಮನೆಗಳ ಸಂಖ್ಯೆ
1.	ಶಿವಮೊಗ್ಗ	1072
2.	ಮೈಸೂರು	303
3.	ಚಿಕ್ಕಮಗಳೂರು	606
4.	ದಕ್ಷಿಣ ಕನ್ನಡ	897
5.	ಹಾಸನ	60
6.	ಕೊಡಗು	0
7.	ಬೆಳಗಾಂ	77
8.	ಧಾರವಾಡ	0
9.	ಉತ್ತರ ಕನ್ನಡ	344
	ಒಟ್ಟು	3359